**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ. ನಾಗರಾಜು, ಇವರು ಪ್ರಸ್ತಾಪಿಸಿರುವ ಶೂನ್ಯವೇಳೆ ಪ್ರಸ್ತಾಪಕ್ಕೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ:**

**ಪ್ರಶ್ನೆ:**

ದಿನಾಂಕ: 15.12.2025 ರಂದು "ಉದ್ಘಾಟನೆ ಭಾಗ್ಯ ಕಾಣದ ಬಸ್ ಡಿಪೋ" ಎಂದು ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ. "ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಜನರಿಗೆ ಹೆಚ್ಚು ಬಸ್‌ಗಳ ಸೌಲಭ್ಯ ಒದಗಿಸಲು ಪಟ್ಟಣದಲ್ಲಿ ಸರ್ಕಾರಿ ಬಸ್ ಡಿಪೋ ಕಟ್ಟಡ ನಿರ್ಮಾಣವಾಗಿದ್ದರೂ ಇನ್ನೂ ಉದ್ಘಾಟನೆಯಾಗಿಲ್ಲ. ಇದರಿಂದ ಪಟ್ಟಣದ ಘಟಕಕ್ಕೆ ದೊರೆಯಬೇಕಾದ ಹೆಚ್ಚು ಬಸ್ಸುಗಳು ದೊರೆಯದೇ ಪ್ರಯಾಣಿಕರು ಪರದಾಡುವಂತಾಗಿದೆ. ಈ ಅವ್ಯವಸ್ಥೆಗೆ ಇಲಾಖೆಯ ಆಡಳಿತ ನಡೆಸುವವರ ಇಚ್ಛಾಶಕ್ತಿ ಕೊರತೆಯೇ ಕಾರಣ ಎಂದು ಜನರು ದೂರುತ್ತಿದ್ದಾರೆ. 2022ರಲ್ಲಿ ಅಂದಿನ ಶಾಸಕರು ಅಂದಾಜು 5 ಕೋಟಿ ರೂ. ವೆಚ್ಚದಲ್ಲಿ ಬಸ್ ಘಟಕ ನಿರ್ಮಾಣಕ್ಕೆ ಚಾಲನೆ ನೀಡಿದ್ದರು. ಗುತ್ತಿಗೆದಾರರ ವಿಳಂಬದಿಂದ ಅರ್ಧಕ್ಕೆ ನಿಂತ ಕಾಮಗಾರಿಯನ್ನು ನಂತರ ಬಂದ ಶಾಸಕರು ಪುನಃ ಆರಂಭಿಸಿದರು. ಇದೀಗ ಕಟ್ಟಡ ನಿರ್ಮಾಣ ಮುಗಿದಿದ್ದರೂ ಉದ್ಘಾಟನೆ ಮಾತ್ರ ಆಗುತ್ತಿಲ್ಲ.

ಈ ಡಿಪೋ ಉದ್ಘಾಟನೆಯಾಗದೇ ಇರುವುದರಿಂದ ಸಹಜವಾಗಿ ಬಸ್‌ಗಳ ಸಂಖ್ಯೆಯೂ ಕಡಿಮೆ ಇದೆ. ಅದರಲ್ಲೂ ಗ್ರಾಮೀಣ ಪ್ರದೇಶಗಳಿಗೆ ತೆರಳುವ ಬಸ್‌ಗಳು ಇನ್ನೂ ಕಡಿಮೆ ಇದ್ದ ಬಸ್‌ಗಳು ನಿಗದಿತ ಸಮಯಕ್ಕೆ ಬರುತ್ತಿಲ್ಲ. ತಾಲ್ಲೂಕಿನ ನೂರಾರು ಹಳ್ಳಿಗಳ ವಿದ್ಯಾರ್ಥಿಗಳು ಧಾರವಾಡ, ಹುಬ್ಬಳ್ಳಿ, ಬೆಳಗಾವಿ ನಗರಗಳ ಶಾಲಾ-ಕಾಲೇಜಿಗೆ ತೆರಳುತ್ತಾರೆ. ಕಿತ್ತೂರು ಬಸ್ ನಿಲ್ದಾಣ, ಇಟಗಿ ಕ್ರಾಸ್, ಎಂ.ಕೆ.ಹುಬ್ಬಳ್ಳಿಯಿಂದ ಬೆಳಿಗ್ಗೆ ಮತ್ತು ಸಂಜೆ ಸಮರ್ಪಕ ಬಸ್ ವ್ಯವಸ್ಥೆ ಇಲ್ಲದೆ ಯಾತನೆ ಅನುಭವಿಸುತ್ತಿದ್ದಾರೆ" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಸದರಿ ಬಸ್ ಡಿಪೋ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದರೂ ಸಹ ಉದ್ಘಾಟನೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು? ಮತ್ತು ಅಭ್ಯರ್ಥಿಗಳ ಅನುಕೂಲಕ್ಕಾಗಿ ಹೆಚ್ಚುವರಿ ಬಸ್ ವ್ಯವಸ್ಥೆಗೆ ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಮಾನ್ಯ ಸಾರಿಗೆ ಇಲಾಖೆ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ ಜಿಲ್ಲೆ ಕಿತ್ತೂರ ಪಟ್ಟಣದಲ್ಲಿ ರೂ.5.00 ಕೋಟಿಗಳ ವೆಚ್ಚದಲ್ಲಿ ನೂತನ ಬಸ್ ಘಟಕ (ಡಿಪೋ) ನಿರ್ಮಿಸಲಾಗಿದ್ದು, ಡಿಸೆಂಬರ್-2024ರಲ್ಲಿ ಕಾಮಗಾರಿ ಮುಕ್ತಾಯಗೊಂಡಿರುತ್ತದೆ. ಘಟಕದಲ್ಲಿ ಇಂಧನ (ಡೀಸೆಲ್) ಟ್ಯಾಂಕ್ ಅಳವಡಿಸುವ ಕಾರ್ಯ, ಅದಕ್ಕೆ ಸಂಬಂಧಿಸಿದ ಪರೀಕ್ಷಾ ಕೆಲಸಗಳು ಹಾಗೂ ಸದರಿ ಡೀಸಲ್ ಟ್ಯಾಂಕ್ ಲೈಸನ್ಸ್ ದೊರೆಯವಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಆಗಿರುವ ವಿಳಂಬ ಮತ್ತು ಮೇ||ಎಚ್‌ಪಿಸಿಎಲ್ ಇವರಿಂದ ಡೀಸೆಲ್ ಟ್ಯಾಂಕ್ ಅಳವಡಿಸುವ ಕೆಲಸಗಳನ್ನು ನೆರವೇರಿಸುವಲ್ಲಿ ವಿಳಂಬವಾಗಿರುತ್ತವೆ. ಅಲ್ಲದೇ ಸದರಿ ನಿವೇಶನದ ಪೂರ್ವ ದಿಕ್ಕಿನ ಕಾಂಪೌಂಡ್ ಗೋಡೆಯ ಬಗ್ಗೆ ಸ್ಥಳೀಯರಿಂದ ತಕರಾರು ಇದ್ದು, ಈ ಕುರಿತು ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಓ.ಎಸ್. ಪ್ರಕರಣ ಸಂಖ್ಯೆ:34/2021, 35/2021, 36/2021, 37/2021 ಮತ್ತು 38/2021 ಪ್ರಕರಣಗಳು ದಿನಾಂಕ:02.03.2021 ರಂದು ದಾಖಲಾಗಿದ್ದು, ಪ್ರಸ್ತುತ ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿಯಿರುತ್ತವೆ.

ಮೇಲ್ಕಂಡ ಎಲ್ಲ ಕಾರಣಗಳಿಂದಾಗಿ ಕಾಮಗಾರಿಯನ್ನು ಉದ್ಘಾಟಿಸಲು ವಿಳಂಬವಾಗಿರುತ್ತದಾದರೂ ಪ್ರಸ್ತುತ ಎಲ್ಲಾ ಕಾಮಗಾರಿ ಕೆಲಸಗಳು ಹಾಗೂ ಡೀಸಲ್ ಟ್ಯಾಂಕ್ ಅಳವಡಿಸುವ ಕಾರ್ಯವು ಪೂರ್ಣಗೊಂಡಿದ್ದು, ಬಸ್ ಘಟಕವನ್ನು ಶೀಘ್ರದಲ್ಲಿಯೇ ಉದ್ಘಾಟಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಚೆನ್ನಮ್ಮನ ಕಿತ್ತೂರು ತಾಲ್ಲೂಕು ವ್ಯಾಪ್ತಿಯಲ್ಲಿನ ಎಲ್ಲ 53 ಗ್ರಾಮ/ಹಳ್ಳಿಗಳಿಗೆ ಸಾರಿಗೆ ಸೇವೆ ಕಲ್ಪಿಸಲಾಗಿದೆ. ಪ್ರಸ್ತುತ ಬೈಲಹೊಂಗಲ ಘಟಕದಿಂದ 24 ಅನುಸೂಚಿಗಳು, ಬೆಳಗಾವಿ ಘಟಕಗಳಿಂದ 22 ಅನುಸೂಚಿಗಳು ಹಾಗೂ ಖಾನಾಪೂರ ಘಟಕದಿಂದ 4 ಅನುಸೂಚಿಗಳು ಹೀಗೆ ಒಟ್ಟು 50 ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಕಿತ್ತೂರು ಬಸ್ ನಿಲ್ದಾಣದಿಂದ ಪ್ರತಿ ದಿನ 446 ಸರತಿಗಳ ಸಾರಿಗೆ ಸೌಲಭ್ಯ ಕಲ್ಪಿಸುವ ಮೂಲಕ ಗ್ರಾಮೀಣ ಭಾಗದ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಾರಿಗೆ ಸೇವೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ ಪ್ರಯಾಣಿಕರ/ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಬೇಡಿಕೆ/ಅವಶ್ಯಕತೆಗೆ ಅನುಗುಣವಾಗಿ ಪ್ರತಿ ದಿನ 30 ಸರತಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಳಗಾವಿ ಮತ್ತು ಧಾರವಾಡ ಮಾರ್ಗದ ಮಧ್ಯೆ ಕಿತ್ತೂರು ಬಸ್ ನಿಲ್ದಾಣ, ಇಟಗಿ ಕ್ರಾಸ್, ಎಂ.ಕೆ.ಹುಬ್ಬಳ್ಳಿ ಮುಖಾಂತರ ಪ್ರತಿದಿನ 80 ದುಂಡು ಸರತಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಇದರಲ್ಲಿ ಬೆಳಿಗ್ಗೆ 08-00 ರಿಂದ 10 ಗಂಟೆಯ ಅವಧಿಯಲ್ಲಿ 15 ಸರತಿಗಳು ಹಾಗೂ ಸಾಯಂಕಾಲ 16-00 ಗಂಟೆಯಿಂದ 10 ಗಂಟೆಯ ಅವಧಿಯಲ್ಲಿ 10 ಸರತಿಗಳು ಕಾರ್ಯಾಚರಣೆಯಲ್ಲಿವೆ.

ಬಸ್ ಘಟಕ ಪ್ರಾರಂಭದ ನಂತರ ಮೇಲಿನ 50 ಅನುಸೂಚಿಗಳನ್ನು ವರ್ಗಾವಣೆ ಮಾಡುವುದರೊಂದಿಗೆ ಅವಶ್ಯಕತೆಗೆ ಅನುಗುಣವಾಗಿ ನೂತನ ಅನುಸೂಚಿಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ.

ಸಂಸ್ಥೆಯಲ್ಲಿ **2023-24 ರಿಂದ 2025-26ರವರೆಗೆ ಖರೀದಿಸಿರುವ/ಖರೀದಿ ಹಂತದಲ್ಲಿರುವ** ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:-

| 2023-24 | 2024-25 | 2025-26 | ಒಟ್ಟು |
|---|---|---|---|
| 296 | 560 | 311** | 1167 |

**ಪ್ರಸಕ್ತ 2025-26ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಹಂಚಿಕೆಯಾಗಿರುವ 300 ಹೊಸ ಬಸ್‌ಗಳ ಟೆಂಡರ್ ಆಹ್ವಾನಿಸಲಾಗಿದ್ದು, ಖರೀದಿ ಆದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ. ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

ಪ್ರಸ್ತುತ ಬೆಳಗಾವಿ ವಿಭಾಗದಲ್ಲಿ ಒಟ್ಟು 689 ಬಸ್ಸುಗಳಿಂದ 645 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ಎಲ್ಲಾ ಬಸ್ಸುಗಳು ಸುಸ್ಥಿತಿಯಲ್ಲಿರುತ್ತವೆ. ಸಾರ್ವಜನಿಕ ಪ್ರಯಾಣಿಕರಿಗೆ ಹೆಚ್ಚಿನ ಹಾಗೂ ಉತ್ತಮ ಸಾರಿಗೆ ಸೇವೆ ಕಲ್ಪಿಸುವ ನಿಟ್ಟಿನಲ್ಲಿ ಮೇಲ್ಕಂಡ ಕೋಷ್ಟಕದನ್ವಯ ಬೆಳಗಾವಿ ವಿಭಾಗಕ್ಕೆ ಈವರೆವಿಗೂ 136 ಹೊಸ ವಾಹನಗಳನ್ನು ಒದಗಿಸಲಾಗಿದೆ. ಇದು ಅಲ್ಲಿನ ಪ್ರಯಾಣಿಕರ ಅವಶ್ಯಕತೆಗನುಗುಣವಾಗಿದ್ದು, ಮುಂದಿನ ದಿನಗಳಲ್ಲಿ ಬೇಡಿಕೆಗನುಗುಣವಾಗಿ ಪರಿಶೀಲಿಸಿ 2025-26ನೇ ಸಾಲಿನಲ್ಲಿ ಹೊಸ ಬಸ್ಸುಗಳನ್ನು ಖರೀದಿಸಲಾಗುತ್ತಿದ್ದು, ಅದರಂತೆ, ಬಸ್ಸುಗಳನ್ನು ಒದಗಿಸಲು ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 276 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು